(ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

**<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-</u>**

1. ಈ ದಾವೆಯನ್ನು ನನ್ನ ತಾಯಿಯವರು ಜಮೀನುಗಳಲ್ಲಿ ಭಾಗ ಬೇಕು ಎಂದು ನಮ್ಮ ಸಹೋದರರಾದ ಕಲ್ಲೆಪ್ಪ, ಅಂಜಿನಪ್ಪ ಮತ್ತು ಬಸ್ಸಮ್ಮ ಇವರ ವಿರುದ್ಧ ದಾಖಲಿಸಿದ್ದಾರೆ. ದವೆಯನ್ನು 5 ಜಮೀನು ಮತ್ತು 1 ಮನೆಯ ಸಂಬಂದ ದಾಖಲಿಸಿದ್ದಾರೆ ಅದರ ಸರ್ವೆ ನಂಬರು ಮತ್ತು ಚೆಕ್ಕು ಬಂದಿ ಹಾಗೂ ವಿಸ್ತೀರ್ಣ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ತಾಯಿಯವರು ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಎಂದು ನಾನು ನೋಡಿಲ್ಲ. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಪಹಣಿ, ವಂಶವೃಕ್ಷ ಮತ್ತು ಪತ್ರಗಳ ಬಗ್ಗೆ ಮಾಹಿತಿ ಇದೆ.

2. ಈ ದಾವೆಗೆ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನನ್ನ ತಾಯಿ ಮತ್ತು ನಾನು ಮಾಹಿತಿ ನೀಡಿರುತ್ತೇವೆ. ನನ್ನ ತಾಯಿ ಹನುಮವ್ವ ಇವರ ತಂದೆಯ ಹೆಸರು ಗುಂಡೂರು ನಿಂಗಪ್ಪ ಮತ್ತು ಅವರ ತಾಯಿಯ ಹೆಸರು ಹನುಮವ್ವ ಆಗಿರುತ್ತದೆ. ಗುಂಡೂರು ನಿಂಗಪ್ಪ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಗುಂಡೂರು ನಿಂಗಪ್ಪ ಇವರಿಗೆ 4 ಜನ ಮಕ್ಕಳು, ಅವರೆಂದರೆ ಹನುಮವ್ವ, ತಿಂದಪ್ಪ, ಅಂಜಿನಪ್ಪ ಮತ್ತು ಕಲ್ಲೆಪ್ಪ ಇವರಲ್ಲಿ ತಿಂದಪ್ಪ ಮತ್ತು ಹನುಮವ್ವ ಮರಣ ಹೊಂದಿದ್ದಾರೆ. ತಿಂದಪ್ಪನ ಹೆಂಡತಿ ಹೆಸರು ಬಸ್ಸಮ್ಮ ಅವರು ಜೀವಂತ ಇರುತ್ತಾರೆ. ಅವರ ಮಕ್ಕಳ ಹೆಸರು ಶಾಮಣ್ಣ ಮತ್ತು ಗಂಗವ್ವ ಅವರು ಜೀವಂತ ಇರುತ್ತಾರೆ. ಸದರಿ ಅವರನ್ನು ಈ ದಾವೆಯಲ್ಲಿ ನಾವು ಸೇರಿಸಿರುವುದಿಲ್ಲ. ತಿಂದಪ್ಪ ಇವರಿಗೆ ಬಸ್ಸಮ್ಮ ಶಾಮಣ್ಣ ಮತ್ತು ಗಂಗಮ್ಮ ಇವರು ವಾರಸುದಾರ ಆಗುತ್ತಾರೆ ಅಂದರೆ ಸರಿ. ಈ ದಾವೆಯಲ್ಲಿ ನಾನು ಅವರನ್ನು ಸೇರಿಸದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

3. ಸಾಕ್ಷಿಗೆ ದಿನಾಂಕ 29.03.2012 ರ ಖರೀದಿ ಪತ್ರದ ದೃಡೀಕೃತ ನಕಲನ್ನು ತೋರಿಸಿ ಸದರಿ ದಾಖಲೆಯಪ್ರಕಾರ 3 ನೇ ಪ್ರತಿವಾದಿ ಅಂಜಿನಪ್ಪ ಇವರು ಗಣೇಶ ತಂದೆ ಚೆನ್ನಪ್ಪ ಇವರಿಂದ ಸಶವೆ ನಂ 223 ಎ/1 ವಿಸ್ತಿರ್ಣ 3 ಎಕರೆ 7 ಸೆನ್ಸ (ಐಟಂ ನಂ 1) ಜಮೀನನ್ನು ಖರೀದಿ ಮಾಡಿದ್ದು ಅದಕ್ಕೆ ಸಂಬಂದಿಸಿದಂತೆ ಈ ಖರೀದಿ ಪತ್ರ ಇರುತ್ತದೆ ಅಂದರೆ ಸಾಕ್ಷಿಯು ದಾಖಲೆ ನೋಡಿ ***ಖರೀದಿ ಪತ್ರ*** ಇರುತ್ತದೆ ಎಂದು ಒಪ್ಪಿಕ್ಕೋಂಡಿದ್ದು ಸದರಿ ದಾಖಲೆಯನ್ನು ***ನಿಡಿ 1*** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನಮ್ಮ ಅಜ್ಜ ನಿಂಗಪ್ಪ ಖರೀದಿ ಮಾಡಿದ್ದು ಅದರ ಪಟ್ಟಾವನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುವುದಿಲ್ಲ ಈ ವಿಚಾರವನ್ನು ತಿಳಿದು 3 ನೇ ಪ್ರತಿವಾದಿ ಅಂಜಿನಪ್ಪ ತನ್ನ ಹೆಸರಿಗೆ ಖರೀದಿ ಪತ್ರ ಮಾಡಿಸಿಕೊಂಡಿರುತ್ತಾರೆ ಅನ್ನುತ್ತಾರೆ.

4. ನನ್ನ ಅಜ್ಜ ಸದರಿ ಜಮೀನನ್ನು ಯಾವ ವರ್ಷ, ಯಾರಿಂದ ಎಷ್ಟು ಹಣಕ್ಕೆ ಖರೀದಿ ಮಾಡಿರುತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಸ್ತಿಯು 3 ನೇ ಪ್ರತಿವಾದಿ ಅಂಜಿನಪ್ಪ ಇವರ ಸ್ವಯಾರ್ಜಿತ ಅಸ್ತಿಯಾಗಿದ್ದು ಈ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಖರೀದಿ ಮಾಡಿದ ದಿನದಿಂದ ದಾವಾ 1 ನೇ ಅಸ್ತಿಯಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ದಾವಾ ಅಸ್ತಿಗಳು ಮೂಲತಃ ಯಾರ ಹೆಸರಿನಿಂದ ಇತ್ತು ನಂತರದಲ್ಲಿ ಯಾರ ಹೆಸರಿಗೆ ದಾಖಲಾಗಿರುತ್ತವೆ ಅನ್ನುವುದರ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಜ ಪಡಿಸಿದ್ದೇನೆ. ಆ ರೀತಿ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ದಾವಾ 1 ನೇ ಅಸ್ತಿಯು ಪಿತ್ರಾರ್ಜಿತ ಅಸ್ತಿ ಅನ್ನುವುದರ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದಿರಾ ಅಂದರೆ ಸಾಕ್ಷಿ ಪಹಣಿಗಳನ್ನು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಈ ದಾವೆ ದಾಖಲಿಸುವ ಪೂರ್ವದಲ್ಲಿ ನಮ್ಮ

ತಾಯಿಯವರು ಪ್ರತಿವಾದಿಯರಿಗೆ ನೋಟೀಸನ್ನು ನೀಡಿರುವುದಿಲ್ಲ. ದಾವಾ 6 ನೇ ಅಸ್ತಿ ಮನೆ ನಮ್ಮ ಅಜ್ಜನ ಹೆಸರಿಗೆ ಇತ್ತು ಈಗ 3 ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ದಾವಾ 6 ನೇ ಅಸ್ತಿ 3 ನೇ ಪ್ರತಿವಾದಿಯ ಹೆಸರಿಗೆ ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ 21 ದಾಖಲೆಯಂತೆ ದಾವಾ ಅಸ್ತಿ 3 ನೇ ಪ್ರತಿವಾದಿಯ ಹೇಳಿಕೆಯ ಹೆಸರಿನಲ್ಲಿ ದಾಖಲು ಇದೆ ಅಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಅದನ್ನು 3 ನೇ ಪ್ರತಿವಾದಿ ಅದನ್ನು ತನ್ನ ಹೆಂಡತಿ ಹೆಸರಿನಲ್ಲಿ ಮಾಡಿಸಿದ್ದಾರೆ ಅನ್ನುತ್ತಾರೆ. ಸದರಿ ಹುಲಿಗೆಮ್ಮ ಇವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಅವರನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

6. ದಾವಾ ಐಟಂ ನಂ 5 314/ಬಿ ವಿಸ್ತೀರ್ಣ 27 ಸೆನ್ಸ ಜಮೀನು ನನ್ನ ತಾಯಿಯ ತಾಯಿ ಹನುಮವ್ವ ಇವರ ಹೆಸರಿನಲ್ಲಿ ಇದೆ ಅಂದರೆ ಸರಿ. ಸದರಿ ಜಮೀನನ್ನು ಸಾಗು ಮಾಡಲು 3 ನೇ ಪ್ರತಿವಾದಿಗೆ ನಾವು ನೀಡಿರುತ್ತೇವೆ ಅಂದರೆ ಸುಳ್ಳು. ಆ ರೀತಿ ನಾವು ಜಮೀನನ್ನು ಕೊಟ್ಟಿರುತ್ತೇವೆ ಈಗ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪಿಂಚಾರ್ ಹೆಡ್ಡಾಳು ಗ್ರಾಮದ ಸರ್ವೆ ನಂ 147/ಎ ವಿಸ್ತೀರ್ಣ 3 ಎಕರೆ 79 ಸೆನ್ಸ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಅಂದರೆ ಸಾಕ್ಷಿಯು ಮೊದಲು ನಮ್ಮ ಅಜ್ಜನ ಹೆಸರಿನಲ್ಲಿ ಇತ್ತು ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಿದೆ ಎನ್ನುತ್ತಾರೆ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಅನ್ಯೂನ್ಯವಾಗಿರುತ್ತೇವೆ ಅಂದರೆ ಸರಿ. ನಾನು ಅವರ ಮನೆಗೆ ಹೋಗಿ ಬರುವುದನ್ನು ಮಾಡುತ್ತೇನೆ ಅಂದರೆ ಸರಿ. 1 ನೇ ಪ್ರತಿವಾದಿ ಏನು ಹೇಳುತ್ತಾರೆ ಅದನ್ನು ನಾನು ಕೇಳುತ್ತೇನೆ ಅಂದರೆ ಸುಳ್ಳು. ನನಗೆ ಮತ್ತು 1 ನೇ ಪ್ರತಿವಾದಿಗೆ ಒಳ್ಳೆಯ ಸಂಬಂದ ಇರುವುದರಿಂದ ಸದರಿ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ

ಜಮೀನನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

7. 1 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ಈಗಲೂ ಸಹ ಒಬ್ಬರಿಗೆ ಒಬ್ಬರು ಮಾತನಾಡುವುದಿಲ್ಲ ಅಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರ ಮಾತನ್ನು ಕೇಳಿ ನಾನು ಈ ಸುಳ್ಳು ದಾವೆಯನ್ನು 3 ನೇ ಪ್ರತಿವಾದಿಗೆ ತೊಂದರೆ ಕೊಡಲು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು 2009-10 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸದರಿ ಭಾಗದ ಸಮಯದಲ್ಲಿ ನಮ್ಮ ತಾಯಿಯವರು ಅಥವಾ ನಾನು ಯಾವುದೇ ತಕರಾರು ಮಾಡಿರುವುದಿಲ್ಲ ಆದರೆ ಅವರು ಭಾಗ ಕೊಡುತ್ತೇನೆ ಎನ್ನುವುದರಿಂದ ಸುಮ್ಮನಾಗಿರುತ್ತೇವೆ. ಸರ್ವೆ ನಂ 314/ಬಿ 27 ಸೆನ್ಸ ಜಮೀನು ನಿಮ್ಮ ಅಜ್ಜಿಯ ಹೆಸರಿನಲ್ಲಿ ಇದೆ ಅದನ್ನು ನಿಮಗೆ ಕೊಡುತ್ತೇವೆ ಎಂದು ಅವರು ಹೇಳಿದ್ದರು ಅಂದರೆ ಸರಿ, ಸಾಕ್ಷಿ ಮುಂದುವರೆದು ಇನ್ನು ಕೊಟ್ಟಿಲ್ಲ ಎನ್ನುತ್ತಾರೆ.

8. 27 ಸೆನ್ಸ ಜಮೀನನ್ನು ಮಾಡಿಕೊಂಡು ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸಾಕ್ಷಿಯು ನಮಗೆ ಯಾವುದೇ ಜಮೀನನ್ನು ಕೊಟ್ಟಿಲ್ಲ ಕೊಡುತ್ತೇವೆ ಎಂದು ಹೇಳಿದ್ದರು ಎನ್ನುತ್ತಾರೆ. 2009-10 ರಲ್ಲಿ ಭಾಗ ಆದ ನಂತರ ಪ್ರತಿವಾದಿಯರ ಹೆಸರಿಗೆ ಪಹಣಿಗಳು ಬಂದಿರುತ್ತವೆ ಅಂದರೆ ಸರಿ. ಸದರಿ ಭಾಗದಂತೆ ಪ್ರತಿವಾದಿಯರು ಅವರ ಅವರ ಜಮೀನಿನಲ್ಲಿ ಉಳುಮೆ ಮಾಡುತ್ತಾರೆ ಅಂದರೆ ಸರಿ. ಅಂಜಿನಪ್ಪ ಇವರಿಗೆ ಬಂದ ಜಮೀನಿನ ಮೇಲೆ ಸದರಿ ಅಂಜಿನಪ್ಪ ಇವರು ಹಂಪಾಪಟ್ನ ಸೊಸೈಟಿಯಲ್ಲಿ ಸಾಲವನ್ನು ಪಡೆದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ಬಸ್ಸಮ್ಮ ಇವರು 2016 ರಲ್ಲಿ ತನ್ನ ಗಂಡನ ಮರಣದ ನಂತರ ತನ್ನ ಹೆಸರಿಗೆ ಪೌತಿ ವಾರಸು ಖಾತೆ ಮಾಡಿಸಿಕೊಂಡಿರುತ್ತಾರೆ ಅಂದರೆ ಸರಿ. 2009-10 ರಲ್ಲಿ ಭಾಗ ಆಗುವ ಸಮಯದಲ್ಲಿ ಬಸ್ಸಮ್ಮ ಇವರ ಗಂಡ ಜೀವಂತ ಇದ್ದ ಅಂದರೆ

ಸರಿ. 2009-10 ರಲ್ಲಿ ಪ್ರತಿವಾದಿ ನಂ 1 ತಿಂದಪ್ಪ, ಅಂಜಿನಪ್ಪ ಇವರು ಭಾಗ ಮಾಡಿಕೊಂಡು ಅವರವರ ಹೆಸರಿಗೆ ಪಹಣಿಗಳನ್ನು ಮಾಡಿಕೊಂಡು ಉಳುಮೆ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿ.

9. ತಿಂದಪ್ಪ ಇವರ ಮರಣದ ನಂತರ 2 ನೇ ಪ್ರತಿವಾದಿ 2016 ರಲ್ಲಿ ತನ್ನ ಹೆಸರಿಗೆ ಪೌತಿವಾರಸು ಖಾತೆ ಮಾಡಿಸಿಕೊಂಡಿರುತ್ತಾರೆ ಅಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ನನ್ನ ತಾಯಿ ಯಾವುದೇ ತಕರಾರನ್ನು ಸಲ್ಲಿಸಿಲ್ಲ ಆದರೆ ಅವರಿಗೆ ಕೇಳಿರುತ್ತೇವೆ ಅವರು ನಮಗೆ ಅಸ್ತಿ ಕೊಡುತ್ತೇವೆ ಎಂದು ಹೇಳಿದ್ದರು. ವಿಭಾಗವಾಗಿ ಸುಮಾರು 15-16 ವರ್ಷಗಳು ಆಗಿರುವುದರಿಂದ ತಡವಾಗಿ ಈ ದಾವೆ ದಾಖಲಿಸಿದ್ದು ಈ ದಾವೆ ಕಾಲಪರಿಮಿತಿ ಅವದಿಯಲ್ಲಿ ಬರುವುದಿಲ್ಲ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ಇವರು OS No. 200/2017 ದಾವೆಯನ್ನು ಶಿವಪ್ರಕಾಶ ಇವರ ವಿರುದ್ದ ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದಾನೆ ಅಂದರೆ ಸರಿ. ಶಿವಪ್ರಕಾಶ ಇವರ ಮೇಲೆ ದಾಖಲಿಸಿರುವ ದಾವೆಯ ದಾವಾ ಅಸ್ತಿಯನ್ನು 1 ನೇ ಪ್ರತಿವಾದಿ ಕಡ್ಲಬಾಳಪ್ಪ ಖರೀದಿ ಮಾಡಿರುವ ಅಸ್ತಿ ಆಗಿರುತ್ತದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಅವರು ಖರೀದಿಸಿಲ್ಲ ಅನ್ನುತ್ತಾರೆ. ಸದರಿ ಅಸ್ತಿಯನ್ನು ಉದ್ದೇಶಪೂರ್ವಕವಾಗಿ ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ.

10. 1 ನೇ ಪ್ರತಿವಾದಿ ಕಡ್ಲಬಾಳಪ್ಪ ಇವರ ಹೆಸರಿನಲ್ಲಿ ಇರುವಂತಹ ಸಂಪೂರ್ಣ ಅಸ್ತಿಗಳನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ನಾವು ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ ನಂ 1, 3 ಮತ್ತು ಮೃತ ತಿಂದಪ್ಪ ಇವರು ವಿಭಾಗ ಮಾಡಿಕೊಂಡಿರುವ ಅಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ನಾವು ಸೇರಿಸಿರುತ್ತೇವೆ, 1 ನೇ ಪ್ರತಿವಾದಿ ಕಡ್ಲಬಾಳಪ್ಪ ಇವರ ಹೆಸರಿನಲ್ಲಿ ಇರುವ ಅಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ.

11. ವಿಭಾಗದಲ್ಲಿ ದಾವಾ ಐಟಂ ನಂ 2 ಸರ್ವೆನಂ 326 ಬಿ 3 ಎಕರೆ 54 ಸೆನ್ಸ 1 ನೇ ಪ್ರತಿವಾದಿ ಕಲ್ಲಬಾಳಪ್ಪ ಇವರಿಗೆ ಬಂದಿರುತ್ತದೆ ಅಂದರೆ ಸರಿ. ವಿಭಾಗದಲ್ಲಿ ದಾವಾ ಐಟಂ ನಂ 3 ಸರ್ವೆ ನಂ 326 ಸಿ ವಿಸ್ತಿರ್ಣ 2 ಎಕರೆ 29 ಸೆನ್ಸ ಜಮೀನು 2 ನೇ ಪ್ರತಿವಾದಿಯ ಗಂಡ ತಿಂದಪ್ಪ ಇವರ ಹೆಸರಿಗೆ ಬಂದಿರುತ್ತದೆ ಅಂದರೆ ಸರಿ. ಸದರಿ ದಾವಾ ಐಟಂ ನಂ 3 ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಅಂದರೆ ಸರಿ. ಅದೇ ರೀತಿ ಐಟಂ ನಂ 4 ಸರ್ವೆ ನಂ 147 ಎ/1 ವಿಸ್ತಿರ್ಣ 2 ಎಕರೆ 36 ಸೆನ್ಸ ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಇದೆ ಅಂದರೆ ಸರಿ. ದಾವಾ ಐಟಂ ನಂ 5 ಸರ್ವೆನಂ 314/ಬಿ ವಿಸ್ತಿರ್ಣ 27 ಸೆನ್ಸ ಜಮೀನು ಮೃತ ಹನುಮವ್ವ ಇವರ ಹೆಸರಿನಲ್ಲಿದೆ ಅಂದರೆ ಸರಿ.

12. ದಾವಾ ಅಸ್ತಿಯಲ್ಲಿ ವಿಭಾಗವಾಗಿ ಅವರವರ ಹಿಸ್ಸೆಗೆ ಬಂದ ಅಸ್ತಿಗಳಲ್ಲಿ ಅವರು ಸ್ವಾಧೀನದಲ್ಲಿ ಇರುವ ವಿಚಾರ ನಮಗೆ ಗೊತ್ತಿದ್ದು ನಾವು ಯಾವುದೇ ತಕರಾರನ್ನು ಮಾಡದೇ ಈಗ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. 2009-10 ರಲ್ಲಿ ವಿಭಾಗವಾದ ನಂತರ 1 ರಿಂದ 3 ನೇ ಪ್ರತಿವಾದಿಯರು ಬೇರೆ ಬೇರೆ ವಾಸವಾಗಿರುತ್ತಾರೆ ಅಂದರೆ ಸರಿ. ಅವರು ವಿಭಾಗವಾದ ನಂತರ ಅವರವರಿಗೆ ಬಂದ ಜಮೀನುಗಳನ್ನು ಅವರೇ ಅವರೇ ಉಳಮೆ ಮಾಡುತ್ತಾ ಅದರ ಅದಾಯವನ್ನು ಅವರೇ ಪಡೆದುಕೊಳ್ಳುತ್ತಾ ಬಂದಿರುತ್ತಾರೆ ಅಂದರೆ ಸರಿ. ಸದರಿ ದಾವಾ 1 ನೇ ಅಸ್ತಿಯು 3 ನೇ ಪ್ರತಿವಾದಿಯ ಸ್ವಯರ್ಜಿತ ಅಸ್ತಿ ಆಗಿದ್ದು ಅದನ್ನು ಈ ದಾವೆಯಲ್ಲಿ ತಪ್ಪಾಗಿ ಸೇರಿಸಿರುತ್ತೀರಿ ಅಂದರೆ ಸರಿಯಲ್ಲ. ನಮ್ಮ ಅಜ್ಜನ ಹೆಸರಿನಲ್ಲಿ ಇದ್ದ ಅಸ್ತಿಗಳನ್ನು ನಮ್ಮ ಅಜ್ಜ ಖರೀದಿಸಿದ್ದು ಇತ್ತು. ನಮ್ಮ ಅಜ್ಜನ ಖರೀದಿ ಮಾಡಿರುತ್ತಾರೆ ಅನ್ನುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಸಾಕ್ಷಿಯು ನಾನು ಈಗಾಗಲೇ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ.

13. ನಮ್ಮ ತಾಯಿಯವರ ವಿವಾಹ ಯಾವ ವರ್ಷ ಅಯಿತು ಎಂದು ನನಗೆ ಮಾಹಿತಿ ಇರುವುದಿಲ್ಲ. ಮದುವೆ ಸಮಯದಲ್ಲಿ ನಮ್ಮ ತಾಯಿಗೆ ಸಾಕಷ್ಟು ಹಣ ಮತ್ತು ಬಂಗಾರವನ್ನು ಕೊಟ್ಟು ವಿವಾಹ ಮಾಡಿಕೊಟ್ಟಿದ್ದಾರೆ ಅಂದರೆ ಸುಳ್ಳು. ನಮ್ಮ ತಾಯಿಯವರು ಈಗಾಗಲೇ ತಮ್ಮ ಪಾಲಿನ ಅಸ್ತಿಯನ್ನು ಪಡೆದಿರುವುರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ನಂ 1, 2 ಮತ್ತು 3 ರವರು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದು ಅವರ ಮನೆಗಳ ಖಾತೆ ನಂಬರು ನನಗೆ ಗೊತ್ತಿಲ್ಲ. ಅವರು ವಾಸವಾಗಿರುವಂತಹ ಮನೆಗಳ ಖಾತೆ ನಂಬರನ್ನು ಪಡೆದು ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಉದ್ದೇಶಪೂರ್ವಕವಾಗಿ ಸದರಿ ಅವರು ವಾಸವಾಗಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆಯು ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ